ಶ್ರೀ ಎಸ್. ಬಂಗಾರಪ್ಪ —ಈಗ ಬ್ಲಾಕ್ ಮಾರ್ಕೆಟಿಯರ್ಸ್ ಇಂದ ಐದು- ಹತ್ತು, ಇಪ್ಪತ್ತೈದು ಸಾವಿರ ರೂಪಾಯಿ ವಸೂಲ್ಮಾಡಿದ್ದಾರೆ, ಅವರ ಬಗ್ಗೆ ಪ್ರಶ್ನೆ ಇಲ್ಲ, ಸಣ್ಣ ಪುಟ್ಟ ಅಂಗಡಿಗಳಿಗೆ ಹೋಗಿ ಎರಡು ಸಾವಿರ ರೂಪಾಯಿ ಟಾರ್ಗೆಟ್ ಫಿಕ್ಸ್ ಮಾಡಿದ್ದಾರೆ. ರಿಕ್ಷಾ, ಸಣ್ಣ ಸಣ್ಣ ಪಾಪುಗಳವರು ಇಷ್ಟಿಷ್ಟು ಕೊಡಬೇಕು ಎಂದು ರಸೀತಿ ಪುಸ್ತಕ ತೆಗೆದುಕೊಂಡು ಹೋಗಿದ್ದಾರೆ ಏನಿಮಮ್ ಒಂದು ಸಾವಿರ ರೂಪಾಯಿ ಎಂದು ಮಾಡಿದ್ದಾರೆ This is collected even in cases of petty shops. ಒಬ್ಬೊಬ್ಬ ಸಬ್ ಇನ್ಸ್‌ಪೆಕ್ಟರ್ ಎರಡು ಲಕ್ಷ ರೂಪಾಯಿ ಮಾಡಿದ್ದಾರೆ. ಬೆಂಗಳೂರು ಸಿಟಿಯಲ್ಲಿ ಒಂದು ಸಾವಿರ ರೂಪಾಯಿ ಒಂದೊಂದು ಪೆಟ್ಟಿ ಷಾಪ್‌ನಿಂದ ವಸೂಲು ಮಾಡಿದ್ದಾರೆ. ಒಬ್ಬೊಬ್ಬ ಸಬ್‌ಇನ್ಸ್‌ಪೆಕ್ಟರ್ ೮೫ ಸಾವಿರ, ಒಂದು ಲಕ್ಷ ರೂಪಾಯಿಗಳವರೆಗೆ ವಸೂಲು ಮಾಡಿದ್ದಾರೆ. ಸಣ್ಣ ಪುಟ್ಟ ಅಂಗಡಿಯವನ್ನು ಗೋಳುಯ್ದುಕೊಳ್ಳುತ್ತಿದ್ದಾರೆ. ಇದೇ ರೀತಿ ಬೇರೆ ಸಂಘದವರಿಗೆ ಪಣ ವಸೂಲಾಗುವುದಿಲ್ಲ, ಪೋಲೀಸಿನವರು ಹೋದಾಗ ಹಣ ವಸೂಲಾಗುತ್ತಿದೆ. ಸರ್ಕಾರದವರು ಕೂಡಲೇ ತಿಳಿಸಬೇಕು, ಸಣ್ಣ ಪುಟ್ಟ, ಮಧ್ಯಮವರ್ಗದವರಿಗೆ ಕಿರುಕುಳ ಮಾಡುವುದು ಬೇಡ. ದಯವಿಟ್ಟು ಮೊದಲು ಇದನ್ನು ನಿಲ್ಲಿಸಿ. ಈಗ ಐವತ್ತು ಲಕ್ಷ ರೂಪಾಯಿ ಟಾರ್ಗೆಟ್ ಇಟ್ಟುಕೊಂಡು ಕಿರುಕುಳ ಕೊಡುತ್ತಿದ್ದಾರೆ.

SRI H. M. CHANNABASAPPA.—It has been brought to the notice of the Government just now. Does he now realise that we require atleast sometime to answer ?

ಶ್ರೀ ಕಾಗೋಡು ತಿಮ್ಮಪ್ಪ ಈಗ ರಿಕ್ಷಾದವರು ಈ ಫಂಡಿಗೆ ೫ ರೂಪಾಯಿ ಕೊಡಬೇಕು ಎಂದು ಹೇಳುತ್ತಿದ್ದಾರೆ. ತಕ್ಷಣ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು.

SRI H. M CHANNABASAPPA.—I will certainly take note of what you have said and see what best can be done in the matter.

Failure of rains in Mysore, Mandya and Hassan District

ಶ್ರೀ ಕೆ. ಹೆಚ್. ಹನುಮೆಗೌಡ (ಹಾಸನ) —ಮೈಸೂರು, ಮಂಡ್ಯ, ಹಾಸನ ಜಿಲ್ಲೆಗಳಲ್ಲಿ ಮಳೆ ಬಾರದೆ ಬಹಳ ತೊಂದರೆಯಲ್ಲಿದ್ದಾರೆ ಇಲ್ಲಿಯವರೆಗೂ ಆಹಾರ ವಿತರಣೆ ಆಗುತ್ತಾ ಇಲ್ಲ. ಗ್ರಾಮಾಂತರ ಪ್ರದೇಶದಲ್ಲಿ ಅನೇಕ ವಿಧವಾದ ತೊಂದರೆಗಳನ್ನು ಅನುಭವಿಸುತ್ತಿದ್ದಾರೆ. ಎರಡು ಮೂರು ಸಾರಿ ಇದರ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ. ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಅಧಿಕಾರಿಗಳು ಆ ಪ್ರದೇಶ ನೋಡಿ ಸರ್ಕಾರಕ್ಕೆ ಅವರ ರಿಪೋರ್ಟ್ ಕಳುಹಿಸಿದ್ದಾರೆ. ಯಾವುದೇ ವಿಧವಾದ ಕ್ರಮ ತೆಗೆದುಕೊಳ್ಳದೆ ಒಂದು ಕೆಲಸವು ಆಗಿಲ್ಲ. ಇನ್ನೊಂದು ಕಡೆ ಮಳೆಯಾಗಿದೆಯೆಂದಕ್ಕೆ ನೀರು ಇಲ್ಲ ಎಷ್ಟು ದಂಡ್ಡು ಕೊಟ್ಟರು ಆಹಾರ ಧಾನ್ಯ ಗ್ರಾಮಾಂತರ ಪ್ರದೇಶದಲ್ಲಿ ಸಿಕ್ಕದೆ ಜನ ಅನೇಕ ವಿಧವಾದ ತೊಂದರೆಗಳನ್ನು ಅನುಭವಿಸುತ್ತಿದ್ದಾರೆ. ಯಾಕೆ ಕಾರಣಕ್ಕೋಸ್ಕರ ಈ ಜನ ನಿರ್ಧಯೆಯಿಂದ ವರ್ತಿಸುತ್ತಿದ್ದಾರೆ ಎಂಬುದು ಗೊತ್ತಿಲ್ಲ

ಅಧ್ಯಕ್ಷರು.—ಇದರ ಗಹನತೆ ಅರ್ಥವಾಗಿದೆ. ಈ ವಿಷಯದ ಸೂಚನೆ ಬಾರುವುದಕ್ಕೆ, ನಾಳೆ ದಿವಸ ರೆವಿನ್ಯೂ ಡಿಮ್ಯಾಂಡ್ ಬರುತ್ತದೆ ಆದರ ಮೇಲೆ ಮಾತನಾಡಿ, ಅದು ಇಲ್ಲ ಅಂದರೆ ಸರ್ಕಾರದ ಜೊತೆಯಲ್ಲಿ ಮಾತನಾಡಿ ಒಂದು ಚರ್ಚೆಗೆ ಏರ್ಪಾಡು ಮಾಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಡಿಸ್ಕಷ್ಷನ್ ಆಗುವುದು ಒಂದು ದಿವಸ ಮಾತ್ರ ಪ್ರತ್ಯೇಕವಾಗಿ ಒಂದು ದಿವಸ ಅವಕಾಶ ಕೊಡುತ್ತೀರಾ ?

ಅಧ್ಯಕ್ಷರು.—ಸರಿಗೆ ಯಾವಾಗ ಚರ್ಚೆಯಾಗುತ್ತದೆ ಎಂಬುದನ್ನು ಕೇಳಬೇಕು ಇದಕ್ಕೆ ಎರಡು ಗಂಟೆ ಕಾಲ ಸಾಕು ಎಂದರೆ ರೆವಿನ್ಯೂ ಮಿನಿಸ್ಟರ್ ಇರಬೇಕು, ಅವರ ಕೆಲಸ ಏನು ಇದೆ ತಿಳಿಯಬೇಕು, ಯಾವುದಕ್ಕೂ ಸ್ವಲ್ಪ ಕಾಲ ಬೇಕಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ —ಬಹಳ ದಿನ ಆದರೆ ತೊಂದರೆಯಾಗುತ್ತದೆ, ನಿಮ್ಮೇ ತೀರ್ಮಾನ ನಾವು ಸೇರುತ್ತೇವೆ ಮೂರನೆಯ ದಿವಸ ಚರ್ಚೆ ಆಗುವ ಹಾಗೆ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.